<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.53/2023. DW.-1.**

ದಿನಾಂಕಃ**01.04.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ</u> ವಾದಿಯರ ಪರ ಶ್ರೀ ಎಂ ಎಸ್ ವಕೀಲರಿಂದಃ-

ನಾನು ಮತ್ತು ನನ್ನ ಗಂಡ ಕೂಲಿ ಕೆಲಸ ಮಾಡುತ್ತೇನೆ. ನಾನು ಓದಿರುವುದಿಲ್ಲ. ನನ್ನ ಗಂಡ ಸಹಃ ಓದಿರುವುದಿಲ್ಲ. ನಾಗಪ್ಪ ಎಂಬುವವರು ನನ್ನ ಮಾವ. ನನ್ನ ಮಾವ ನಾಗಪ್ಪನಿಗೆ ಒಬ್ಬರು ಗಂಡು ಮತ್ತು ಒಬ್ಬರು ಹೆಣ್ಣು ಮಕ್ಕಳು. ನಾನು ಈಗ ಭಗವತ್ ನಗರದಲ್ಲಿ ವಾಸವಿದ್ದೇನೆ. ಭಗವತ್ ನಗರದಲ್ಲಿ ನನಗೆ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ, ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೆ. ಇತ್ತೀಚೆಗೆ ನಮ್ಮ ಸೈಟಿನಲ್ಲಿ ಶೆಡ್ ಕಟ್ಟಿಕೊಂಡು ವಾಸವಾಗಿದ್ದೇನೆ.

ವಾದಿಯ ಸ್ವತ್ತು ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ನಮ್ಮ ಸ್ವತ್ತು ಎಲ್ಲಿ ಇದೆ ಎಂದು ನನಗೆ ಗೊತ್ತು, ಅದು ನಿಜಲಿಂಗಪ್ಪ ಬಡಾವಣೆ, ಕಡೂರು ಇಲ್ಲಿ ಬರುತ್ತದೆ. ದಾವಾ ಸ್ವತ್ತಿನ ಅಸೆಸ್ ಮೆಂಟ್ ನಂಬರ್ ನನಗೆ ಗೊತ್ತಿಲ್ಲ. ನಿಮ್ಮ ಸ್ವತ್ತಿನ ಅಸೆಸ್ ಮೆಂಟ್ ನಂಬರ್ 127 ಆಗಿರುತ್ತದೆ. ನಮ್ಮ ಸ್ವತ್ತಿನ ಪೂರ್ವಕ್ಕೆ ಮುಸ್ಲಿಮ್ಸ್ ರವರ ಖಾಲಿ ಜಾಗ, ದಕ್ಷಿಣಕ್ಕೆ ರಸ್ತೆ, ಪಶ್ಚಿಮ ಮತ್ತು ಉತ್ತರಕ್ಕೆ ಖಾಲಿ ನಿವೇಶನ ಇದೆ, ಸದರಿ ನಿವೇಶನ ಯಾರದ್ದು ಎಂದು ನನಗೆ ಗೊತ್ತಿಲ್ಲ.

ಬೀರೂರು ಪುರಸಭೆಯವರು ಸದರಿ ನಿವೇಶನಗಳನ್ನು 2001 ರಲ್ಲಿ ಹಂಚಿಕೆ ಮಾಡಿರುತ್ತಾರೆ. ಆ ಸಮಯದಲ್ಲಿ ಸುಮಾರು 60–70 ಜನರಿಗೆ ನಿವೇಶನ ಮಂಜೂರು ಮಾಡಿರುತ್ತಾರೆ. ನಿಜಲಿಂಗಪ್ಪ ಬಡಾವಣೆಯನ್ನು ಪುರಸಭೆಯವರು ಹೊಸದಾಗಿ ನಿರ್ಮಾಣಮಾಡಿರುತ್ತಾರೆ ಎಂದರೆ ಅದು ಹೊಸದಲ್ಲ ಅದು ಮೊದಲಿನಿಂದಲೂ ಇತ್ತು. ನಾನು ಪ್ರತಿವಾದ ಪತ್ರದ 7 ನೇ ಪ್ಯಾರಾದಲ್ಲಿ ಸದರಿ ಬಡಾವಣೆಯನ್ನು ಹೊಸದಾಗಿ ನಿರ್ಮಿಸಿರುತ್ತಾರೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ 1 ನ್ನು ನನಗೆ ಬೀರೂರು ಪುರಸಭೆಯವರು ನೀಡಿರುತ್ತಾರೆ. ನಿಡಿ 1 ರಲ್ಲಿ ರುವ ಪೊಟೋಟದಲ್ಲಿ ಕಾಣುವ ವ್ಯಕ್ತಿ ನನ್ನ ಗಂಡ. ನಿಡಿ 1 ರಲ್ಲಿ ಮೊದಲಿಗೆ bracket ನಲ್ಲಿ ಮಂಜುನಾಥ ಎಂದು ಬರೆದಿದ್ದು ನಂತರ ಅಕ್ಕಮ್ಮ ಎಂದು ಬರೆಯಲಾಗಿದೆ ಎಂದರೆ ಸರಿ. ಪುರಸಭೆಯವರು ಹಕ್ಕು ಪತ್ರ ನೀಡುವಾಗ ಯಾವುದೇ ಪೋಟೋ ಹಕ್ಕು ಪತ್ರದ ಮೇಲೆ ಅಂಟಿಸಿರುವುದಿಲ್ಲ ಎಂದರೆ ಸರಿ. ನಿಡಿ 1 ರ ಮೇಲೆ ನನ್ನ ಗಂಡ ಎಂದು ಹೇಳುವ ವ್ಯಕ್ತಿಯ ಪೋಟೋವನ್ನು ನಾವೇ ಅಂಟಿಸಿಕೊಂಡಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಇ-ಸ್ವತ್ತು ಮಾಡಿಸುವಾಗ ನಾವು ಪೋಟೋ ಅಂಟಿಸಿಕೊಟ್ಟಿರುತ್ತೇವೆ.

ನಿಡಿ 1 ನ್ನು ಪುರಸಭೆಯವರು ನೀಡಿರುವುದಿಲ್ಲ ಬದಲಾಗಿ ನಾವು ನಮ್ಮ ವಾರ್ಡಿನ ಕೌನ್ಸಿಲರ್ ಜೊತೆ ಷರಿಕ್ಕಾಗಿ ನಿಡಿ 1 ನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಿ ಡಿ 1

ರಲ್ಲಿ ನಮ್ಮ ಹೆಸರು ಇರುವುದನ್ನು ಹೊರತು ಪಡಿಸಿ ನಾವು ಹಾಜರುಪಡಿಸಿರುವ ಬೇರೆ ಯಾವುದೇ ದಾಖಲೆಗಳಲ್ಲಿ ನಮ್ಮ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಮ್ಮ ಹೆಸರು ಇರುವುದಿಲ್ಲ ಅವುಗಳಲ್ಲಿ ಮಂಜುನಾಥ ಬಿನ್ ನಾಗಪ್ಪ ರವರ ಹೆಸರು ಇರುತ್ತದೆ ಎಂದರೆ ಸರಿಯಲ್ಲ.

ನಾನು ಈಗ ಸೈಟಿನಲ್ಲಿ ಶೆಡ್ ನಲ್ಲಿ ವಾಸವಾಗಿದ್ದೇವೆ. ಸದರಿ ಶೆಡ್ ನಲ್ಲಿ ಸು.15 ವರ್ಷಗಳಿಂದ ಇದ್ದೇವೆ. ನಿಡಿ 2 ನನ್ನ ಗಂಡನ ಆಧಾರ್ ಕಾರ್ಡ್. ನಿಡಿ 2 ರ ವಿಳಾಸದಲ್ಲಿ ಭಗವತ್ ನಗರ ಎಂದು ವಿಳಾಸ ನಮೂದು ಇದೆ ಎಂದರೆ ಬಾಡಿಗೆ ಮನೆಯಲ್ಲಿ ವಾಸವಾಗಿದ್ದಾಗ ಮಾಡಿಸಿದ್ದೆವು.

ದಾವಾ ಸ್ವತ್ತು ಮೂಲತಃ ಮಂಜುನಾಥ ಬಿನ್ ನಾಗಪ್ಪ ಎಂಬ ವಾದಿಗೆ ಸೇರಿದ ಸ್ವತ್ತಾಗಿದ್ದು ಅದನ್ನು ಲಪಟಾಯಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದಕ್ಕೆ ಪೂರಕವಾಗಿ ನಾವು ಸುಳ್ಳು ದಾಖಲೆ ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ನಾಗಪ್ಪ ಈಗ ಜೀವಂತವಿಲ್ಲ. ಅವರು ಮೃತಪಟ್ಟು 5-6 ವರ್ಷ ಕಳೆದಿದೆ. ನನ್ನ ಮಾವ ಸಹಃ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಮಾವ ರೈಲ್ವೆ ಇಲಾಖೆಯಲ್ಲಿ ಕೆಲಸದಲ್ಲಿ ಇದ್ದರು ಎಂದರೆ ಸರಿಯಲ್ಲ. ನನ್ನ ಮಾವ ಸರ್ಕಾರಿ ನೌಕರನಾಗಿ ಕರ್ತವ್ಯ ನಿರ್ವಹಿಸಿದ್ದರು ಸಹಃ ನಾನು ಕೂಲಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ ಸರ್ಕಾರಿ ನೌಕರನಾಗಿದ್ದ ಕಾರಣ ನಮಗೆ ಯಾವುದೇ ನಿವೇಶನ ಸರ್ಕಾರದಿಂದ ಮಂಜೂರಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನಿಡಿ 1, 2, 3 ನ್ನು ಹೊರತು ಪಡಿಸಿ ಉಳಿದೆಲ್ಲಾ ದಾಖಲೆಗಳು ವಾದಿಗೆ ಸೇರಿದ ದಾಖಲೆಗಳು ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಿ ಮುಂದೂಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.